ರಾ ಗ – ಸೌ ರಾ ಷ್ಟ್ರ : ತಾ ಳ – ಆ ದಿ ತಾ ಳ

ಆನಂದ ತೀರ್ಥರೆಂಬೊ ಅರ್ಥಿಯ ಪೆಸರುಳ್ಳ । ಗುರು ಮಧ್ವಮುನಿರಾಯ । ಪ ।

ಏನೆಂಬೆ ನಾನಿಮ್ಮ ಕರುಣಕ್ಕೆ ಎಣೆಗಾಣೆ
ಗುರು ಮಧ್ವಮುನಿರಾಯ । ಅ ಪ ।

ಬೇಸರದೆ ಸರ್ವರೊಳು ಶ್ವಾಸಜಪಂಗಳ ಮಾಡಿ
ಗುರು ಮಧ್ವಮುನಿರಾಯ
ಶ್ರೀಶಗರ್ಪಿಸುತ ನಿನ್ನ ದಾಸರನು ಸಲಹಿದಿ
ಗುರು ಮಧ್ವಮುನಿರಾಯ । ೧ ।

ಅಂದು ಹನುಮಂತನಾಗಿ ಬಂದು ಸುಗ್ರೀವಗೆ
ಗುರು ಮಧ್ವಮುನಿರಾಯ
ಅಂದವಾದ ಪದವಿತ್ತಾನಂದದಿಂದ ಪೊರೆದೆಯೊ
ಗುರು ಮಧ್ವಮುನಿರಾಯ । ೨ ।

ಕುಂತಿಯ ಕುಮಾರನಾಗಿ ಹೊಂತ ಕೌರವರ ಕೊಂದೆ
ಗುರು ಮಧ್ವಮುನಿರಾಯ
ಅನಂತ ಪುಣ್ಯವ ಗಳಿಸಿ ಶ್ರೀಕಾಂತನಿಗರ್ಪಿಸಿದೆ
ಗುರು ಮಧ್ವಮುನಿರಾಯ । ೩ ।

ಅದ್ವೈತರನು ಕಾದು ಗೆದ್ದು ನಿನ್ನ ಭಕ್ತರಿಗೆ
ಗುರು ಮಧ್ವಮುನಿರಾಯ
ಶುದ್ಧ ತಾತ್ಪರ್ಯ ವಾಕ್ಯ ಪದ್ಧತಿಯ ತಿಳಿಸಿದೆ
ಗುರು ಮಧ್ವಮುನಿರಾಯ । ೪ ।

ಗುರುಪ್ರಾಣೇಶವಿಟ್ಠಲ ಪರನೆಂದು ಡಂಗುರವ
ಗುರು ಮಧ್ವಮುನಿರಾಯ
ಸಾರಿ ಸಜ್ಜನರಿಗೆ ಹರಿಯ ಲೋಕ ತೋರಿಸಿದಿ
ಗುರು ಮಧ್ವಮುನಿರಾಯ । ೫ ।

ರಾಗ – ಪಂತುವರಾಳಿ : ತಾಳ – ತಿಶ್ರ ಛಾಪು

ನೆರೆನಂಬಿ ಪಡೆಯಿರೊ ಹಿತವ ನಮ್ಮ
ಗುರುವಾದ ಮಧ್ವಮುನಿ ಸಮ್ಮತವ । ಪ ।

ತ್ರೇತೆಯೊಳಂಜನಾ ತನಯನಾಗಿ
ಸೀತಾರಮಣ ರಘುನಾಥಗೆ ಪ್ರಿಯ
ದೂತತನದಿ ಖಳತತಿಯ ಕೊಂದು
ಖ್ಯಾತಿ ಪಡೆದ ಹನುಮನಾದ ಯತಿಯ । ೧ ।

ದ್ವಾಪರದಲಿ ಭೀಮನೆನಿಸಿ ಪಾಂಡು
ಭೂಪನರಸಿ ಕುಂತಿದೇವಿಯೊಳುದಿಸಿ
ಶ್ರೀಪತಿಗರ್ಥಿಯ ಸಲಿಸಿ ನೃಪಾ–
ನೃಪರೆಲ್ಲರ ಕೊಂದ ಮಹಿಮನ್ನ ಭಜಿಸಿ । ೨ ।

ಕಲಿಯುಗದಲಿ ಯತಿಯಾಗಿ ಈ
ಇಳೆಯ ದುಶ್ಯಾಸ್ತ್ರವ ಜರಿದ ವಿರಾಗಿ
ಕುಲಗುರು ಶ್ರೀ ಮಧ್ವಯೋಗಿ ನಮ್ಮ
ಚಲುವ ಹಯವದನನ ಭಂಟನೆಂದು ಬಾಗಿ । ೩ ।
**(ವಾದಿರಾಜರ ಕೃತಿ)**

ರಾ ಗ – ಕ ಮಾ ಚ್ : ತಾ ಳ – ಆ ದಿ ತಾ ಳ

ಗುರು ಮಧ್ವಮುನಿರನ್ನ ಮೂರು ಪರಿಯದೋರಿದೆ ನಿನ್ನ
ಹರಿಭಕ್ತಿಯಲಿ ಅವಿಚ್ಛಿನ್ನ ಸರಿಯಾರು ಧರೆಯೊಳು ನಿನ್ನ
ಸ್ಮರಣೆಯಲಿಹೆ ರಾಮನ್ನ ಪರಮಪಾವನ್ನ ।೧।

ಅತಿಬಾಹು ಪರಾಕ್ರಮ ಕ್ಷಿತಿಯೊಳು ನಿನ್ನದೇ ನೇಮ
ಪ್ರಥಮಲ್ಯಾದೆ ಹನುಮ ದ್ವಿತಿಯಲ್ಯಾದೆ ಭೀಮ
ತೃತಿಯಲ್ಲಿ ಪೂರ್ಣ ಪ್ರಾಜ್ಞನೆನಿಸಿದೆ ನಿಸ್ಸೀಮ ।೨।
ಸಾಹ್ಯಕ್ಕೆ ಕಾರಣ ಮಹಾದೈತ್ಯರ ಮರ್ದನ
ಶ್ರೀಹರಿ ಸಾನ್ನಿಧ್ಯ ಪೂರ್ಣ ಇಹ ಸಕಲನಿಪುಣ
ಮಹಿಪತಿ ಮುಖ್ಯಪ್ರಾಣ ಸ್ವಹಿತ ಸಾಧನ ।@।
**(ಮಹಿಪತಿದಾಸರ ಕೃತಿ)**

ರಾ ಗ – ನಾ ಟಿ : ತಾ ಳ – ಮಿ ಶ್ರ ಛಾ ಪು ತಾ ಳ

ಏನ ಬಂಣ್ಣಿಪೆನಮ್ಮ ।ಪ।
ಬಂಣಿಪೆ ನಮ್ಮಯ್ಯ ಗುರುರಾಯರ ।ಅ ಪ।

ಮಧ್ವಸರೋವರ ತೀರದ ಮುದ್ದುಕೃಷ್ಣನ ಪ್ರ–
ಸಿದ್ಧಿಯಿಂದ ಪೂಜೆಮಾಡಿ ಗೆದ್ದ ಬಲವಂತ ರಾಯರ ।೧।

ಭವಬಂಧ ಮಾಯಿಗಳ ಕಾಲಲೊದ್ದು ಮೂಲಿಲ್ಹಾಕಿ
ಮಧ್ವಶಾಸ್ತ್ರವೆಲ್ಲ ಪ್ರಸಿದ್ಧ ಮಾಡಿದ ಯತಿರಾಯರ ।೨।

ಸಿರಿ ಹಯವದನನ ಚರಣಕಮಲವನ್ನು
ನಿರುತವಾಗಿ ಸೇವಿಸುವ ಅಚ್ಛಿನ್ನ ನಿಜದಾಸರ ।೩।
**(ವಾದಿರಾಜರ ಕೃತಿ)**

ರಾ ಗ – ಬೇ ಹಾ ಗ್ : ತಾ ಳ – ಆ ದಿ ತಾ ಳ

ಹನುಮನ ಮತವೆ ಹರಿಯ ಮತವೊ । ಪ ।
ಹರಿಯ ಮತವೆ ಹನುಮನ ಮತವೊ । ಅ ಪ ।

ಹನುಮನ ನಂಬಿದ ಸುಗ್ರೀವ ಗೆದ್ದ
ಹನುಮನ ನಂಬದ ವಾಲಿಯು ಬಿದ್ದ । ೧ ।
ಹನುಮನ ನಂಬಿದ ವಿಭೀಷಣ ಗೆದ್ದ
ಹನುಮನ ನಂಬದ ರಾವಣ ಬಿದ್ದ । ೨ ।
ಹನುಮ ಪುರಂದರವಿಟ್ಠಲನ ದಾಸ
ಪುರಂದರವಿಟ್ಠಲನು ಹನುಮನೊಳ್ವಾಸ । ೩ ।

## ರಾಗ – ಕಲ್ಯಾಣಿ – ಆದಿತಾಳ

ಸ್ವಾಮಿ ಮುಖ್ಯ ಪ್ರಾಣ ನಿನ್ನ ಮರೆವರ ಘಂಟಲ ಗಾನಾ
ಹಿದಿದ್ಯೋ ರಾಮನ ಚರಣ ನೀ ಹೌದೌದೋ ಮುಖ್ಯಪ್ರಾಣ ॥ ಪ ॥

ಸಂಜೀವನ ಪರ್ವತವ ನೀ ಅಂಜದೆ ತಂದ್ಯೋ ದೇವ್ ।
ಅಂಜನೆ ಸುತ ಸದಾಕಾವ ಹೃತ್ ಕಂಜವಾಸ ಸರ್ವಜೀವ ॥ ೧ ॥

ಏಕಾದಶರ ರುದ್ರ ನೀ ವೈದ್ಯೋರಾಮರ ಮುದ್ರ ।
ಸಕಲ ವಿದ್ಯಾ ಸಮುದ್ರ ನೀ ಹೌದು ಹೌದು ಬಲಭದ್ರ ॥ ೨ ॥

ವೈಕುಂಠದಿಂದ ಬಂದು ನೀ ಪಂಪಾಕ್ಷೇತ್ರದಿ ನಿಂದು ।
ಯಂತ್ರೋದ್ಧಾರಕನೆಂದು ಪುರಂದರ ವಿಠಲ ಸಲಹೆಂದು ॥ ೩ ॥

ರಾ ಗ – ಮೋ ಹ ನ : ತಾ ಳ – ಆ ದಿ ತಾ ಳ

ಪ್ರಾಣ ಬಾರೋ ಜಗತ್ರಾಣ ಬಾರೋ
ಪ್ರಾಣಿ ಸಕಲ ಕರ್ಮ ಮಾಳ್ಪ ಜಾಣ ಬಾರೋ ।ಪ।

ಪಂಚ ರೂಪದಿ ಪ್ರಾಪಂಚ ವ್ಯಾಪ್ತ ಬಾರೋ
ಹಂಚಿಕೇಲಿ ದೈತ್ಯೆಯರ ವಂಚಕನೆ ಬಾರೋ ।೧।

ಪಾಯುಪಸ್ತಕರ್ಮ ಗೈವಾಪಾನ ಬಾರೋ
ವಾಯುವ ನೀ ನಿರೋಧಿಸೆ ಕಾಯ್ವರಾರೋ ।೨।

ಗೋಣುಮುರಿವ ಭಾರಹೊರುವ ವ್ಯಾನ ಬಾರೋ
ಪ್ರಾಣಪಂಚ ವ್ಯೂಹ ಮುಖ್ಯ ವ್ಯಾನ ಬಾರೋ ।೩।
ಉದಕ ಅನ್ನಕ್ಕವಕಾ ಶುದಾನ ಬಾರೋ
ಮುದದಿ ಶ್ವಾಸಮಂತ್ರ ಜಪ ಜಾಣ ಬಾರೋ ।೪।

ವೈದಿಕ ಲೌಕಿಕ ಶಬ್ದ ನುಡಿಸೆ ಬಾರೋ
ಊರ್ಧ್ವಗತಿ ದಾತನೆ ಉದಾನ ಬಾರೋ ।೫।

ಪಾನ ಅನ್ನಗಳ್ಹಂಚೆ ಸ ಮಾನ ಬಾರೋ
ಧ್ಯಾನವಿಂತು ಈವ ಮುಖ್ಯ ಪ್ರಾಣ ಬಾರೋ ।೬।

ಕರುಣಾಸಾಗರ ದೇಹ ವೀಣೆ ಚರಿಸೆ ಬಾರೋ
ಗುರುಗೋವಿಂದವಿಟ್ಠಲಾಧೀಷ್ಠಿತ ಗುರುವೆ ಬಾರೋ ।೭।
**(ಗುರುಗೋವಿಂದದಾಸರ ಕೃತಿ)**

ರಾ ಗ – ಪ ಂ ತು ವ ರಾ ಳಿ : ತಾ ಳ – ಆ ದಿ ತಾ ಳ

ಬೊಮ್ಮಗಟ್ಟಿರಾಯ ಪಾಲಿಸೊ ನಮ್ಮ ನೀ ಮಾರಾಯ
ಧರ್ಮ ಕಾಮ್ಯಾರ್ಥ ಕೊಡುವೊ ಕರುಣಾಂಬುಧಿ ।ಪ।

ಸುಗ್ರೀವಗೆ ನೀ ಒಲಿದ್ವಾಲಿಯನು
ನಿಗ್ರಹ ಮಾಡುತ ಪರಮಾಗ್ರಹದಲಿ
ಶೀಘ್ರದಿಂದಲಿ ದಶಗ್ರೀವನ ಲಂಕ
ದುರ್ಗದಲ್ಲಾಡಿದ್ಯಗ್ನಿಯ ಒಡಗೂಡಿ ।೧।

ರಾಮಪಾದಾಂಬುಜ ಸೇವಕ ಸೇತುವೆ
ಪ್ರೇಮದಿ ಕಟ್ಟಿ ನಿಂತನು ರಣದಿ
ನೇಮದಿಂದಲಿ ಸಂಜೀವನ ತಂದಾತ
ವಾಹನನಾದ ತ್ರಿಧಾಮದೊಡೆಯಗೆ ।೨।

ವಾತಾತ್ಮಜ ರಘುನಾಥಗೆ ನೀ ನಿಜ
ದೂತನೆನಿಸಿ ಬಹು ಪ್ರೀತಿಯಲಿ
ಭೂತಳದೊಳು ಪ್ರಖ್ಯಾತಿಯ ಪಡೆದೆ ನಿ–
ರ್ಭೀತನಾದ ಭೀಮೇಶಕೃಷ್ಣನ ಪ್ರಿಯ ।೩।

ರಾ ಗ – ಕ ಲ್ಯಾ ಣಿ : ತಾ ಳ – ಅ ಟ ತಾ ಳ

ಅಂಜಿಕಿನ್ಯಾತಕಯ್ಯ ಸಜ್ಜನರಿಗೆ
ಭಯವು ಇನ್ಯಾತಕಯ್ಯಾ ।ಪ।

ಸಂಜೀವರಾಯರ ಸ್ಮರಣೆ ಮಾಡಿದಮೇಲೆ ।ಅ ಪ।

ಕನಸಿಲಿ ಮನಸಿಲಿ ಕಳವಳವಾದರೆ
ಹನುಮನ ನೆನೆದರೆ ಹಾರಿಹೋಗದೆ ಭೀತಿ ।೧।

ರೋಮ ರೋಮಕೆ ಕೋಟಿ ಲಿಂಗವುದುರಿಸಿದ
ಭೀಮನ ನೆನೆದರೆ ಬಿಟ್ಟು ಹೋಗದೆ ಪಾಪ ।೨।

ಪುರಂದರವಿಟ್ಠಲನ ಪೂಜೆಯ ಮಾಡುವ
ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ ।೩।
**(ಪುರಂದರದಾಸರ ಕೃತಿ)**

ರಾ ಗ – ಪೀ ಲು : ತಾ ಳ – ಆ ದಿ ತಾ ಳ

ಎಂಥ ಬಲವಂತನೊ ಕುಂತಿಯ ಸುಜಾತನೊ ।ಪ।
ಭಾರತೀಗೆ ಕಾಂತನೊ ನಿತ್ಯ ಶ್ರೀಮಂತನೊ ।ಅ ಪ।

ರಾಮಚಂದ್ರನ ಪ್ರಾಣನೊ ಅಸುರ ಹೃದಯ ಬಾಣನೊ
ಖಳರ ಗಂಟಲ ಗಾಣನೊ ಜಗದೊಳಗೆ ಪ್ರವೀಣನೊ ।೧।

ಕುಂತಿಯ ಕಂದನೊ ಸೌಗಂಧಿಕವ ತಂದನೊ
ಕುರುಕ್ಷೇತ್ರಕೆ ಬಂದನೊ ಕೌರವರ ಕೊಂದನೊ ।೨।

ಭಂಡಿ ಅನ್ನವನುಂಡನೊ ಬಕನ ಪ್ರಾಣವ ಕೊಂಡನೊ
ಭೀಮ ಪ್ರಚಂಡನೊ ದ್ರೌಪದಿಗೆ ಗಂಡನೊ ।೩।

ವೈಷ್ಣವಾಗ್ರಗಣ್ಯನೊ ಸಂಚಿತಾಗ್ರ ಪುಣ್ಯನೊ
ದೇವವರೇಣ್ಯನೊ ದೇವಶರಣ್ಯನೊ ।೪।

ಮಧ್ವಶಾಸ್ತ್ರವ ರಚಿಸಿದನೊ ಸದ್ವೈಷ್ಣವರ ಸಲಹಿದನೊ
ಉಡುಪಿ ಕೃಷ್ಣನ ನಿಲಿಸಿದನೊ ಪುರಂದರವಿಟ್ಠಲನ ಒಲಿಸಿದನೆ ।೫।
**(ಪುರಂದರದಾಸರ ಕೃತಿ)**

## ರಾಗ: ಕಲ್ಯಾಣಿ ತಾಳ: ಅಟ್ಟತಾಳ.

ಗುರುರಾಯರ ನಂಬಿರೋ! ಮಾರುತಿಯೆಂಬ! ಗುರುರಾಯರ ನಂಬಿರೋ! ( ಪಲ್ಲವಿ)

ಗುರುರಾಯರ ನಂಬಿ ಬಿಡದೆ ಯಾವಾಗಲು!
ದುರಿತವ ಕಳೆದು ಸದ್ಗತಿಯ ಪಡೆವರೆಲ್ಲ !ಅ. ಪ!

ವನಧಿಯ ಮನೋವೇಗದಿ! ಲಂಘಿಸಿ ಮಹೀ!
ತನುಜೆ ಶೋಕವ ತರಿದು!
ವನವ ಬೇರೊಡನೆ ಕಿತ್ತೀಡಾಡಿ ಇದಿರಾದ!
ದನುಜರ ಬಡೆದು ಲಂಕೆಯ ತನ್ನ ಸಖಗಿತ್ತ !!ಗುರು !! ೧ !

ಕೌರವ ಬಕ ಹಿಡಿಂಬ! ಕೀಚಕರೆಂಬ!
ದುರಳ ಸಂತತಿ ನೆಗ್ಗೊತ್ತಿ!
ಘೋರ ಪಾತಕಿ ದುಷ್ಯಾಸನನ ರಕುತವ!
ಹೀರಿ ಮುದದಿ ಮುರವೈರಿಯ ಭಜಿಸಿದ !!ಗುರು !! ೨ !

ಜೀವೇಶ ರೊಂದೇಯೆಂಬ!
ದುರ್ವಾದಿಯ! ಭಾವಶಾಸ್ತ್ರವ ಮುರಿದು!
ಕೋವಿದರಿಗೆ ಸದ್ಭಾಷ್ಯವ ತೋರಿದ!
ದೇವ ಪುರಂದರ ವಿಟ್ಠಲ ಸೇವಕರಾದ !!ಗುರು !! ೩ !

ರಾ ಗ – ಕಾ ಪಿ : ತಾ ಳ – ಛಾ ಪು ತಾ ಳ

ಕರವ ಮುಗಿದ ಮುಖ್ಯಪ್ರಾಣ । ಕರವ ಮುಗಿದ । ಪ ।

ಕರವ ಮುಗಿದ ಶ್ರೀಹರಿಗೆ ಎದುರಾಗಿ
ದುರುಳರ ಸದೆದು ಶರಣರ ಪೊರೆಯೆಂದು । ಅ ಪ ।

ಜೀವೇಶರೈಕ್ಯವು ಜಗತು ಮಿಥ್ಯಾ ಎಂದು
ಈ ವಿಧ ಪೇಳುವ ಮಾಯಿಗಳನಳಿಯೆಂದು । ೧ ।
ಇಲ್ಲಿ ಮಾತ್ರ ಭೇದ ಅಲ್ಲಿ ಒಂದೇ ಎಂಬ
ಕ್ಷುಲ್ಲಕರನು ಹಿಡಿದು ಹಲ್ಲು ಮುರೀಯೆಂದು । ೨ ।
ತಾರತಮ್ಯ ಪಂಚಭೇದ ಸತ್ಯವೆಂಬ
ಮಾರುತ ಮತ ಪೊಂದಿದವರ ನೀ ಕಾಯೆಂದು । ೩ ।
ಪರಿಪರಿ ಜೀವರ ಹೃದಯದೊಳಗೆ ನಿಂತು
ನಿರುತ ಮಾಡುವ ಕರ್ಮ ಹರಿಗೆ ಅರ್ಪಿತವೆಂದು । ೪ ।
ಹರಿ ಮಾಡುವ ವ್ಯಾಪಾರ ಬಲ್ಲ ಕಾರಣನಾಗಿ
ಸಿರಿ ಪುರಂದರವಿಟ್ಠಲನ ಚರಣಕ್ಕೆರಗಿ ನಿಂತು । ೫ ।
**(ಪುರಂದರದಾಸರ ಕೃತಿ)**

ರಾ ಗ – ಕಾ ಂ ಬೋ ದಿ : ತಾ ಳ – ಝ ಂ ಪೆ ತಾ ಳ

ಅಪಮೃತ್ಯು ಪರಿಹರಿಸೊ ಅನಿಲದೇವ
ಕೃಪಣವತ್ಸಲನೆ ಕಾವರ ಕಾಣೆ ಜಗದೊಳಗೆ । ಪ ।

ನಿನಗಿನ್ನು ಸಮರಾದ ಅನಿಮಿತ್ತ ಬಾಂಧವರು
ಎನಗಿಲ್ಲ ಆವಾವ ಜನುಮದಲ್ಲಿ

ಅನುದಿನವು ಎಮ್ಮನು ಉದಾಸೀನ ಮಾಡುವುದು
ಅನುಚಿತವು ಜಗದಿ ಸಜ್ಜನ ಶಿಖಾಮಣಿಯೆ ।೧।

ಕರಣಾಭಿಮಾನಿಗಳು ಕಿಂಕರರು ಮೂಲೋಕದರಸು
ಹರಿಯು ನಿನ್ನೊಳಗಿಪ್ಪ ಸರ್ವಕಾಲ
ಪರಿಸರನೆ ಈ ಭಾಗ್ಯ ದೊರೆತನಕೆ ಸರಿಯುಂಟೆ
ಗುರುವರ್ಯ ನೀ ದಯಾಕರನೆಂದು ಪ್ರಾರ್ಥಿಸುವೆ ।೨।
ಭವರೋಗ ಮೋಚಕನೆ ಪವಮಾನರಾಯ ನಿ–
ನ್ನವರವನು ನಾನು ಮಾಧವಪ್ರಿಯನೆ
ಜವನ ಬಾಧೆಯ ಬಿಡಿಸೊ ಅವನಿಯೊಳು ಸುಜನರಿಗೆ
ದಿವಿಜಗಣ ಮಧ್ಯದಲಿ ಪ್ರವರ ನೀನಹುದೊ ।೩।

ಜ್ಞಾನಾಯುರೂಪಕನು ನೀನಹುದೊ ವಾಣಿ
ಪಂಚಾನನಾದ್ಯಮರರಿಗೆ ಪ್ರಾಣದೇವ
ದೀನವತ್ಸಲನೆಂದು ನಾ ನಿನ್ನ ಮೊರೆಹೊಕ್ಕೆ
ದಾನವಾರಣ್ಯ ಕೃಶಾನು ಸರ್ವದಾ ಎನ್ನ ।೪।
ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು
ಸಾಧಾರಣವಲ್ಲ ಸಾಧು ಪ್ರಿಯನೆ
ವೇದವಾದೋದಿತ ಜಗನ್ನಾಥವಿಟ್ಠಲನ
ಪಾದಭಜನೆಯಿತ್ತು ಮೋದ ಕೊಡು ಸತತ ।೫।
**(ಜಗನ್ನಾಥದಾಸರ ಕೃತಿ)**

ರಾಗ – ನಾಟಿ : ತಾಳ – ಆದಿತಾಳ

ಎಣೆಯಾರೊ ನಿನಗೆ ಹನುಮಂತರಾಯ ।ಪ।
ಎಣೆಯಾರೊ ನಿನಗೆ ತ್ರಿಭುವನದೊಳಗೆಲ್ಲ
ಪ್ರಣತಜನ ಮಂದಾರ ಪವನ ಸುಕುಮಾರ ।ಅ ಪ।

ಅಡಿಗಡಿಗೆ ರಾಮಪದಾಂಬುಜಕೆ ವಂದಿಸುತ
ನಡೆನಡೆದು ಮುದ್ರಿಕೆಯ ಪಡೆದು ಮುದದಿ
ದಡದಡನೆ ಅಂಬುಧಿಯ ದಾಟಿ ಸೀತೆಗೆ ಗುರುತ
ಕೊಡುಕೊಡುತ ಕುಸ್ತರಿಸಿದಂಥ ಹನುಮಂತ ।@।
ಗರಗರನೆ ಪಲ್ಗಡಿದು ಕಲುಷದೈತ್ಯರನೆಲ್ಲ
ಚರಚರನೆ ಸೀಳಿ ಸಂಭ್ರಮದಿಂದ
ಬಿರಬಿರನೆ ಕಣ್ಬಿಡುತ ಬಿಂಕದಲಿ ಲಂಕೆಯನು
ಸುರಸುರನೆ ಬಾಲದಲಿ ಸುಟ್ಟ ರಣದಿಟ್ಟ । ೨ ।

ಫಳಫಳನೆ ಆರ್ಭಟದಿಂದ ರಾವಣನ
ನಳನಳನೆ ಬೆಳೆದ ನಂದನವ ಕಿತ್ತು
ಖಳಖಳನೆ ನಗುತ ದಶಕಂಧರನ ಗುದ್ದಿ ಬಂದೆ
ಭಳಿಭಳಿರೆ ಹಯವದನದಾಸ ನಿಸ್ಸೀಮ । ೩ ।

**(ವಾದಿರಾಜರ ಕೃತಿ)**

ರಾ ಗ – ಮೋ ಹ ನ : ತಾ ಳ – ಅ ಟ ತಾ ಳ

ಹನುಮ ನಮ್ಮ ತಾಯಿತಂದೆ ಭೀಮ ನಮ್ಮ ಬಂಧುಬಳಗ
ಆನಂದತೀರ್ಥರೇ ನಮ್ಮ ಗತಿಗೋತ್ರವಯ್ಯ । ಪ ।

ತಾಯಿತಂದೆ ಹಸುಳೆಗೆ ಸಹಾಯಮಾಡಿ ಸಾಕುವಂತೆ
ಆಯಾಸವಿಲ್ಲದೆ ಸಂಜೀವನವ ತಂದೆ
ಗಾಯಗೊಂಡ ಕಪಿಗಳನ್ನು ಸಾಯದಂತೆ ಪೊರೆದ ರಘು–
ರಾಯನಂಘ್ರಿಗಳೇ ಸಾಕ್ಷಿ ತ್ರೇತಾಯುಗದಿ । ೧ ।
ಬಂಧುಬಳಗದಂತೆ ಆಪದ್ಬಾಂಧವನಾಗಿ ಪಾರ್ಥನಿಗೆ
ಬಂದ ಬಂದ ದುರಿತಗಳ ಪರಿಹರಿಸಿ

ಅಂಧಕಜಾತರ ಕೊಂದು ನಂದಕಂದಾರ್ಪಣೆಂದ ಗೋ–
ವಿಂದನಂಘ್ರಿಗಳೇ ಸಾಕ್ಷಿ ದ್ವಾಪರಯುಗದಿ ।೨।

ಗತಿಗೋತ್ರರಂತೆ ಸಾಧುತತಿಗಳಿಗೆ ಮತಿಯ ತೋರಿ
ಮತಿಗೆಟ್ಟ ಇಪ್ಪತ್ತೊಂದು ಮತವ ಖಂಡಿಸಿ
ಗತಿಗೆಟ್ಟ ಸದ್ವೈಷ್ಣವರಿಗೆ ಸದ್ಗತಿಯ ತೋರಿದೆ ಪರಮಾತ್ಮ
ಗತಿ ಪುರಂದರವಿಟ್ಠಲನೆ ಸಾಕ್ಷಿ ಕಲಿಯುಗದಲ್ಲಿ ।೩।

**(ಪುರಂದರದಾಸರ ಕೃತಿ)**

ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಕೂಸಿನ ಕಂಡೀರಾ ಮುಖ್ಯ ಪ್ರಾಣನ ಕಂಡೀರಾ ।ಪ।
ಬಾಲನ ಕಂಡೀರಾ ಬಲವಂತನ ಕಂಡೀರಾ ।ಅ ಪ।
ಅಂಜನೆ ಉದರದಿ ಜನಿಸಿತು ಕೂಸು
ರಾಮನ ಪಾದಕ್ಕೆರಗಿತು ಕೂಸು
ಸೀತೆಗೆ ಉಂಗುರ ಕೊಟ್ಟಿತು ಕೂಸು
ಲಂಕಾಪುರವನು ಸುಟ್ಟಿತು ಕೂಸು ।೧।

ಭಂಡೀ ಅನ್ನವ ನುಂಗಿತು ಕೂಸು
ಬಕನ ಪ್ರಾಣವ ಕೊಂಡಿತು ಕೂಸು
ವಿಷದ ಲಡ್ಡುಗೆಯ ಮೆದ್ದಿತು ಕೂಸು
ಮಡದಿಗೆ ಪುಷ್ಪವ ಕೊಟ್ಟಿತು ಕೂಸು ।೨।

ಮಾಯಾಽವೆಲ್ಲ ಗೆದ್ದಿತು ಕೂಸು
ಮಧ್ವಮತವನುದ್ಧರಿಸಿತು ಕೂಸು
ಪುರಂದರವಿಟ್ಠಲನ ದಯದಿಂದ ಕೂಸು
ಸುಮ್ಮನೆ ಉಡುಪಿಲಿ ನಿಂತಿತು ಕೂಸು ।೩।

ರಾ ಗ – ತೋ ಡಿ : ತಾ ಳ – ಆ ದಿ ತಾ ಳ

ಪವಮಾನ ಜಗದ ಪ್ರಾಣ ಸಂಕರುಷಣಭವ ಭವಾರಣ್ಯ ದಹನ ।ಪ।
ಶ್ರವಣವೆ ಮೊದಲಾದ ನವವಿಧ ಭಕುತಿಯ
ತವಕದಿಂದಲಿ ಕೊಡು ಕವಿಗಳ ಪ್ರಿಯ ।ಅ ಪ।

ಹೇಮ ಕಚ್ಚುಟ ಉಪವೀತ । ಧರಿಪ ಮಾರುತ
ಕಾಮಾದಿ ವರ್ಗರಹಿತ
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ
ರಾಮಚಂದ್ರನ ನಿಜದೂತ
ಯಾಮಯಾಮಕೆ ನಿನ್ನಾರಾಧಿಪುದಕೆ
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ
ಈ ಮನಸಿಗೆ ಸುಖಸ್ತೋಮವ ತೋರುತ
ಪಾಮರ ಮತಿಯನು ನೀ ಮಾಣಿಪುದು ।೧।
ವಜ್ರ ಶರೀರ ಗಂಭೀರ ಮಕುಟಧರ
ದುರ್ಜನ ವನಕುಠಾರ
ನಿರ್ಜರಮಣಿ ದಯಾಪಾರ ವಾರ ಉದಾರ
ಸಜ್ಜನರಘ ಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು
ಮೂರ್ಜಗವರಿವಂತೆ ಗರ್ಜನೆ ಮಾಡಿದೆ
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ
ಮಜ್ಜನದಲಿ ಭವವರ್ಜಿತನೆನಿಸೊ ।೨।

ಪ್ರಾಣ ಅಪಾನ ವ್ಯಾನ ಉದಾನ ಸಮಾನ ಆನಂದ ಭಾರತಿ ರಮಣ
ನೀನೆ ಶರ್ವಾದಿ ಗೀರ್ವಾಣಾದ್ಯರಿಗೆ
ಜ್ಞಾನಧನ ಪಾಲಿಪ ವರೇಣ್ಯ
ನಾನು ನಿರುತದಲಿ ಏನೇನೆಸಗಿದ
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ
ಪ್ರಾಣನಾಥ ಸಿರಿ ವಿಜಯವಿಟ್ಠಲನ
ಕಾಣಿಸಿ ಕೊಡುವುದು ಭಾನುಪ್ರಕಾಶ ।೩। (ವಿಜಯದಾಸರ ಕೃತಿ)

ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಬಿಡುವೇನೇನಯ್ಯ ಹನುಮ ಬಿಡುವೇನೇನಯ್ಯ
ನಾ ಸುಮ್ಮನೆ ಬಿಡುವೇನೇನಯ್ಯ ।ಪ।

ಬಿಡುವೇನೇನೊ ಹನುಮ ನಿನ್ನ ಅಡಿಗಳಿಗೆ ಶಿರವ ಕಟ್ಟಿ
ಒಡೆಯನಲ್ಲಿ ಜ್ಞಾನ ಭಕ್ತಿಯನೆನಗೆ
ಕೊಡುವ ತನಕ ಸುಮ್ಮನೆ ನಿನ್ನ ।ಅ ಪ।

ಹಸ್ತವನೆತ್ತಿದರೇನು ಹಾರಾಕಾಲನು ಇಟ್ಟರೇನು
ಭೃತ್ಯನು ನಿನ್ನವನು ನಾನು ಹಸ್ತಿವರದನ ತೋರುವ ತನಕ ।೧।

ಹಲ್ಲು ಮುಡಿಯ ಕಚ್ಚಿದರೇನು ಅಂಜುವೆನೆ ನಿನಗೆ ನಾನು
ಫುಲ್ಲನಾಭನಲ್ಲಿ ಎನ್ನ ಮನಸ ನೀ ನಿಲ್ಲಿಸೋ ತನಕ ।೨।

ಡೊಂಕುಮೋರೆ ಬಾಲವ ತಿದ್ದಿ ಹೂಂಕರಿಸಿದರೆ ಅಂಜುವನಲ್ಲ
ಕಿಂಕರ ನಿನ್ನವನು ನಾನು ಪುರಂದರವಿಟ್ಠಲನ ತೋರುವ ತನಕ ।೩।
**(ಪುರಂದರದಾಸರ ಕೃತಿ)**

ರಾಗ – ಆನಂದಭೈರವಿ : ತಾಳ – ಅಟತಾಳ

ವೀರ ಹನುಮ ಬಹು ಪರಾಕ್ರಮ ।ಪ।
ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ।ಅ ಪ।

ರಾಮದೂತನೆನಿಸಿಕೊಂಡೆ ನೀ । ರಾಕ್ಷಸರ ವನವನೆಲ್ಲ ಕಿತ್ತು ಬಂದೆ ನೀ
ಜಾನಕಿಗೆ ಮುದ್ರೆಯಿತ್ತು । ಜಗತಿಗೆಲ್ಲ ಹರುಷವಿತ್ತು
ಚೂಡಾಮಣಿಯ ರಾಮಗಿತ್ತು । ಲೋಕಕೆ ಮುದ್ದೆನಿಸಿ ಮೆರೆವ ।೧।

ಗೋಪಿಸುತನ ಪಾದ ಪೂಜಿಸಿ । ಗದೆಯ ಧರಿಸಿ ಬಕಾಸುರನ ಸಂಹರಿಸಿದೆ

ದ್ರೌಪದಿಯ ಮೊರೆಯ ಕೇಳಿ । ಮತ್ತೆ ಕೀಚಕನ್ನ ಕೊಂದು
ಭೀಮನೆಂಬ ನಾಮ ಧರಿಸಿ । ಸಂಗ್ರಾಮಧೀರನಾಗಿ ಜಗದಿ ।೨।
ಮಧ್ಯಗೇಹನಲ್ಲಿ ಜನಿಸಿ ನೀ । ಬಾಲ್ಯದಲ್ಲಿ ಮಸ್ಕರೀಯ ರೂಪಗೊಂಡೆ ನೀ
ಸತ್ಯವತಿಯ ಸುತನ ಭಜಿಸಿ । ಸನ್ಮುಖದಿ ಭಾಷ್ಯ ಮಾಡಿ
ಸಜ್ಜನರ ಪೊರೆವ । ಮುದ್ದು ಪುರಂದರವಿಟ್ಠಲನ ದಾಸ ।೩।
**(ಪುರಂದರದಾಸರ ಕೃತಿ)**

ರಾಗ – ಕಾಂಬೋದಿ : ತಾಳ – ಝಂಪೆ ತಾಳ

ಭಾರತೀರಮಣ ಸದ್ಭಕ್ತ ಬಂಧೋ ಈ
ಘೋರ ಭವಭಯ ಪರಾಭವಗೈಸು ಬೇಗ ।ಪ।

ಲೋಕಾಂತರಾತ್ಮಕನೆ ಈ ಕಮಲಜಾಂಡದೊಳು
ನಾ ಕಾಣೆ ನಿನ್ನುಳಿದು ಸಾಕುವವರ
ನೀ ಕೈಪಿಡಿದು ಕೃಪಾವಲೋಕನದಿ
ಭಕ್ತರಲಿ ಕರುಣವ ಮಾಡು ಮೈನಾಕಿವರಜನಕ ।೧।

ಅನಿಲ ಎಮ್ಮ ಅವಗುಣವೆಣಿಸುವರೆ ಕಡೆಯುಂಟೆ
ಕೊನೆಗೆ ನೀನೆ ಗತಿಯೊ ಅನಿಮಿಷೇಶ
ಜನನಿ ಜನಕ ಭ್ರಾತ ಜನಪ ಗುರು ವರಮಿತ್ರ
ಎನಗೆ ನೀ ಸಕಲ ಸೌಖ್ಯದನೆಂದು ಪ್ರಾರ್ಥಿಸಿದೆ ।೨।

ಹನುಮಭೀಮಾನಂದ ಮುನಿರಾಯ ನಿನ್ನ ಪ್ರಾ–
ರ್ಥನೆ ಗೈಯುವರು ವಾಣಿ ಫಣಿಪ ಮೃಡರು
ಅನಿಮಿತ್ತ ಬಾಂಧವ ಜಗನ್ನಾಥವಿಟ್ಠಲನ
ತನಯ ತಾಪಕರ ಬಂಧನ ಮೋಚನವಮಾಡೊ ।೩।
**(ಜಗನ್ನಾಥದಾಸರ ಕೃತಿ)**

ರಾ ಗ – ಕ ಲ್ಯಾ ಣಿ : ತಾ ಳ – ಅ ಟ ತಾ ಳ

ಜಾಣ ನೀನಹುದೊ ಗುರು ಮುಖ್ಯಪ್ರಾಣ ನೀನಹುದೊ ।ಪ।

ರಾಣಿ ಭಾರತೀರಮಣ ನಿನಗೆಣೆಕಾಣೆ ತ್ರಿಭುವನದೊಳಗೆ ಸರ್ವ
ಪ್ರಾಣಿಗಳ ಹೃದಯದಲಿ ಮುಖ್ಯ ಪ್ರಾಣನೆಂದೆನಿಸಿದೆಯೊ ಸ್ವಾಮಿ ।ಅ ಪ।

ಧೀರ ನೀನಹುದೊ ವಾಯುಕುಮಾರ ನೀನಹುದೊ
ಸಾರಿದವರ ಮನೋರಥಂಗಳ
ಬಾರಿಬಾರಿಗೆ ಕೊಡುವೆನೆನುತಲಿ
ಕ್ಷೀರನದೀತೀರದಲಿ ನೆಲೆಸಿಹ
ಮಾರುತಾವತಾರ ಹನುಮ ।೧।

ಧಿಟ್ಟ ನೀನಹುದೊ ಬೆಟ್ಟ ತಂದಿಟ್ಟವ ನೀನಹುದೊ
ರಟ್ಟೆ ಹಿಡಿದಕ್ಷಯಕುಮಾರನ
ಕುಟ್ಟಿ ದೈತ್ಯರ ಕೆಡಹಿ ಬೇಗದಿ
ಸುಟ್ಟು ಲಂಕೆಯ ಸೀತೆಗುಂಗುರ
ಕೊಟ್ಟೆ ಮೂಜಗಜೆಟ್ಟಿ ಹನುಮ ।೨।

ಚಂಡ ನೀನಹುದೊ ದುರಿತ ಮಾರ್ತಾಂಡ ನೀನಹುದೊ
ಕುಂಡಲವು ಕಿರಿಘಂಟೆ ಉಡಿಯಲಿ
ಪೆಂಡೆ ನೂಪುರ ಕಾಲಲಂದಿಗೆ
ತಂಡತಂಡದಿ ಕೃಷ್ಣನಂಘ್ರಿ
ಪುಂಡರೀಕಕೆ ಕೈಯ ಮುಗಿದ ।೩।

**(ವ್ಯಾಸರಾಜರ ಕೃತಿ)**

ರಾ ಗ – ನಾ ಟಿ : ತಾ ಳ – ಝಂ ಪೆ ತಾ ಳ

ಜಯ ವಾಯು ಹನುಮಂತ ಜಯ ಭೀಮ ಬಲವಂತ ।ಪ।
ಜಯ ಪೂರ್ಣ ಮತಿವಂತ ಜಯ ಸಲಹೊ ಸಂತ ।ಅ ಪ।

ಅಂಜನೆಯಲಿ ಜನಿಸಿ ಅಂದು ರಾಮನ ಸೇವೆ
ನಂದದಲಿ ಮಾಡಿ ಕಪಿ ಬಲವ ಕೂಡಿ
ಸಿಂಧು ಲಂಘಿಸಿ ವನ ಭಂಗಿಸಿ ಸೀತೆ–
ಗುಂಗುರವ ಕೊಟ್ಟೆ ಲಂಕಾಪುರವ ಸುಟ್ಟೆ ।೧।
ಹರಿಗೆ ಚೂಡಾಮಣಿಯನಿತ್ತು ಹರಿಗಳ ಕೂಡಿ
ಶರಧಿಯನು ಕಟ್ಟಿ ಅರಿಬಲವ ಕುಟ್ಟಿ
ಉರಗ ಬಂಧನದಿಂದ ಕಪಿವರರರು ಮೈಮರೆಯೆ
ಗಿರಿಯ ಸಂಜೀವನವ ತಂದು ಬದುಕಿಸಿದೆ ।೨।
ದ್ವಾಪರಾಂತ್ಯದಿ ಪಾಂಡು ಭೂಪನಾತ್ಮಜನೆನಿಸಿ
ಶ್ರೀಪಾರ್ಥ ಸಾರಥಿಯ ಭಜಕ ನೀನಾದೆ
ಪಾಪಿ ಮಾಗಧ ಬಕ ಕೀಚಕ ಹಿಡಿಂಬಕರ
ಕೋಪದಿಂದಲಿ ತರಿದೆ ಮೂಜಗದಿ ಮೆರೆದೆ ।೩।

ಧುರದಲಿ ದುರ್ಯೋಧನನ ಬಲವನು ತರಿದೆ
ಅರಿತು ದುಶ್ಯಾಸನನ ಒಡಲನ್ನು ಬಗೆದೆ
ಉರವ ತಪ್ಪಿಸಿ ಕೌರವನ್ನ ತೊಡೆಗಳ ಮುರಿದೆ
ಹರಿಯ ಕಿಂಕರ ಧುರಂಧರಗಾರು ಸರಿಯೆ ।೪।
ಕಲಿಯುಗದಲಿ ಕಳ್ಳರುದಿಸಿ ದುರ್ಮತಗಳನು
ಬಲಿಸಿ ಶ್ರೀಹರಿಯ ಗುಣಗಳನು ಮರೆಸಿ
ಕಲಿಯನನುಸರಿಸಲು ಗುರುವಾಗಿ ಅವತರಿಸಿ
ಖಳರ ದುರ್ಮತ ಮುರಿದೆ ಶ್ರೀಕೃಷ್ಣ ಪರನೆಂದೆ ।೫।
**(ವ್ಯಾಸರಾಜರ ಕೃತಿ)**

ರಾ ಗ – ನಾ ದ ನಾ ಮ ಕ್ರಿ ಯೆ : ತಾ ಳ – ಆ ದಿ ತಾ ಳ

ಘಟಿಕಾಚಲದಿ ನಿಂತ ಶ್ರೀ ಹನುಮಂತ ।ಪ।

ಘಟಿಕಾಚಲದಿ ನಿಂತ ಪಟು ಹನುಮಂತನ
ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ।ಅ ಪ।

ಚತುರ ಯುಗದಿ ತಾನು ಮುಖ್ಯಪ್ರಾಣನು
ಚತುರಮುಖನಯ್ಯನ
ಚತುರ ಮೂರುತಿಗಳನು ಚತುರತನದಿ ಭಜಿಸಿ
ಚತುರ್ಮುಖನಾಗಿ ಜಗಕೆ ಚತುರ್ವಿಧ ಫಲ ಕೊಡುತೆ ।೧।

ಸರಸಿಜ ಭವಗೋಸ್ಕರ ಕಲ್ಮಷದೂರ
ವರ ಚಕ್ರತೀರ್ಥ ಸರ
ಮೆರೆವಾಚಲದಿ ನಿತ್ಯ ನರಹರಿಗೆದುರಾಗಿ
ಸ್ಥಿರ ಯೋಗಾಸನದಿ ಕರೆದು ವರಗಳ ಕೊಡುತೆ ।೨।

ಶಂಖ ಚಕ್ರವ ಧರಿಸಿ ಭಕ್ತರ ಮನಃ
ಪಂಕವ ಪರಿಹರಿಸಿ
ಪಂಕಜನಾಭ ಶ್ರೀ ಪುರಂದರವಿಟ್ಠಲನ
ಬಿಂಕದ ಸೇವಕ ಸಂಕಟ ಕಳೆಯುತ ।೩।
**(ಪುರಂದರದಾಸರ ಕೃತಿ)**

## ರಾಗ – ಮಧ್ಯಮಾತಿ – ಅಟ್ಟತಾಳ

ಪ್ರಾಣನಾಥನ ನೋಡುವ ಬನ್ನಿ । ಹರಿ ದಾಸರೆಲ್ಲ ॥
ಬೇಡಿದ ಮುಕ್ತಿಯ ನೀಡುವ ನಾಡೊಳು ।
ನೋಡುವ ಜನರ ಕಾಡುವ ನಮ್ಮ ದೊರೆ ॥ ೧ ॥

ಇಂದಿರೆ ಅರಸನ ಚರಣ ದ್ವಂದ್ವವ ಹೊಂದಿ ।
ಮಂದರಧರ ಮಧುಸೂದನ ಭಕ್ತನ ॥ ೨ ॥

ಹರಿಹರ ಕರಿವರದ ಪರಾತ್ಪರಾ ।
ಪುರುಷನ ಭಕ್ತನ ಪರಿಪಾಲನಮ್ಮ ॥ ೩ ॥

ಶ್ರೀದ ಹನುಮ ಭೀಮ ಮಧ್ವಾಂತರ್ಗತ ।
ರಾಮಕೃಷ್ಣ ವೇದವ್ಯಾಸಾರ್ಪಿತವೆಂದು ॥ ೪ ॥

ಸೃಷ್ಟಿಯೊಳಗೆ ಬಂದು ಮುಕ್ತ ಪುರಾನಿಂದು ।
ದುಷ್ಟ ದೈತ್ಯರ ಕೊಂದು **ವೆಂಕಟವಿಠಲ**ನ ದಾಸನೆಂದು ॥ ೫ ॥

### ರಾಗ – ಕಾಪಿ – ಅಟ್ಟತಾಳ

ಸಾರಿ ಬಂದನೆ । ಪ್ರಾಣೇಶ ಬಂದನೆ ॥ ಪ ॥
ಸಾರಿ ಬಂದು ಲಂಕಾಪುರವ ಮೀರಿದ ರಾವಣನ ।
ಕಂಡು ಧೀರ ಒಯ್ಯಾರದಿಂದ ॥ ಅ.ಪ ॥
ವಾಯುಪುತ್ರನೆ ಶ್ರೀರಾಮದೂತನೆ ।
ಪ್ರೀತಿಯಿಂದ ಸೀತಾಂಗನೆಗೆ ಮುದ್ರಿಕೆಯ ತಂದಿತ್ತವನೆ ॥ ೧ ॥
ಭೀಮಸೇನನೆ ಕುಂತೀ ತನಯನೆ ।
ವಿರಾಟನ ಮನೆಯಲಿ ನಿಂತು ಕೀಚಕನ ಸಂಹರಿಸಿದವನೆ ॥ ೨ ॥
ಮಧ್ವರಾಯನೆ ಸರ್ವಜ್ಞ ಶ್ರೇಷ್ಠನೆ ।
ಅದ್ವೈತವ ಗೆದ್ದು **ಪುರಂದರವಿಠಲ**ನ ಮುಂದೆ ನಿಂತನೆ ॥ ೩ ॥

ರಾಗ – ಸಾವೇರಿ – ಛಾಪತಾಳ

ಹನುಮಂತ ನೀ ಬಲು ಜಯವಂತನಯ್ಯಾ ॥ ಪ ॥

ಅನುಮಾನವಿಲ್ಲದಾನಂದತೀರ್ಥಾಚಾರ್ಯ ॥ ಅ.ಪ ॥

ರಾಮಸೇವಕನಾಗಿ ರಾವಣನ ಪುರವ ನಿ ।
ಧೂರ್ಮ ಮಾಡಿದ್ಯೊನಿಂದು ನಿಮಿಷದೊಳಗೆ ॥
ಭೂಮಿ ಪುತ್ರಿಗೆ ಮುದ್ರೆ ಉಂಗುರವನಿತ್ತು ನೀ
ಪ್ರೇಮ ಕುಶಲವ ರಾಮಪಾದಕರ್ಪಿಸಿದೆ ॥ ೧ ॥

ಕೃಷ್ಣಾವತಾರದಲಿ ಭೀಮನಾಗ್ಯವತರಿಸಿ ।
ದುಷ್ಟ ದೈತ್ಯರನೆಲ್ಲ ಸಂಹರಿಸಿದೇ ॥
ದೃಷ್ಟಿಹೀನನಾದ ಧೃತರಾಷ್ಟ್ರನೊಂಶವ ನೀನು ।
ಕಷ್ಟವಿಲ್ಲದೆ ಕೊಂದು ಶ್ರೀಕೃಷ್ಣಗರ್ಪಿಸಿದೇ ॥ ೨ ॥

ಪತಿತಸಂಕರ ಪುಟ್ಟಿ ಮತವೆಲ್ಲ ಕೆಡಿಸಲು ।
ಮತಹೀನರಾಗೆ ಸಜ್ಜನಗಳೆಲ್ಲಾ ॥
ಅತಿವೇಗದಲಿ ಮಧ್ವಯತಿಯಾಗಿ ಅವತರಿಸಿ ।
ಗತಿಯ ತೋರಿಸಿದೆ **ಹಯವದನ**ನ ನಿಜದಾಸಾ ॥ ೩ ॥

**(ವಾದಿರಾಜರ ಕೃತಿ)**

## ರಾಗ – ನಾಟಿ – ಝಂಪೆತಾಳ

ಎಣೆ ಯಾರೊ ನಿನಗೆ ಹನುಮಂತರಾಯಾ ॥ಪ ॥
ಎಣೆ ಯಾರೊ ನಿನಗೆ ತ್ರಿಭುವನದೊಳಗೆಲ್ಲ ।
ಪುಣತ ಜನ ಮಂದಾರ ಪವನ ಸುಕುಮಾರ ॥ ಅ. ಪ ॥

ಅಡಿಗಡಿಗೆ ರಾಮರ ಪಾದಾಂಬುಜಕೆ ವಂದಿಸುತ ।
ನಡ ನಡೆದು ಮುದ್ರಿಕೆಯುಗೊಂಡು ಮುದದಿ ॥
ಧಡಢಡನೆ ಅಂಬುಧಿಯಾ ದಾಟಿ ಸೀತೆಗೆ ಗುರು ತಾ ।
ಕೊಡ ಕೊಡುತ್ತಾ ಕುಸ್ತರಿಸಿದಂತ ಹನುಮಂತಾ ॥ ೧ ॥

ಗರಗರನೆ ಹಲ್ಗಿರಿದು ಕಲುಷ ದೈತ್ಯರನೆಲ್ಲ ।
ಚರಚರನೆ ಸೀಳಿ ಸಂಭ್ರಮದಿಂದಲೀ ॥
ಬಿರಿಬಿರಿನೆ ಕಣ್ಬಿಡುತ ಬಿಂಕದಲಿ ಲಂಕೆಯನು ।
ಸುರಸುರನೆ ಬಾಲದಲಿ ಸುಟ್ಟ ರಣ ಧಿಟ್ಟ ॥ ೨ ॥

ಘಳಘಳನೆ ಆರ್ಭಟಿಸಿ ಭಾಪುರೇ ರಾವಣನ
ಬೆಳೆಬೆಳೆದ ನಂದನವನವ ಕಿತ್ತಿ ॥
ಕಳಕಳನೆ ನಗುತ ದಶಕಂಧರನ ಗುದ್ದಿದೆಯೊ ।
ಭಳಿಭಳಿರೆ ಹಯವದನನ ದಾಸ ನಿರ್ದೋಷ ॥ ೩ ॥
**(ವಾದಿರಾಜರ ಕೃತಿ)**

## ರಾಗ – ಬಿಲಹರಿ – ಆದಿತಾಳ

ಹನುಮನ ಮನೆಯವರು ನಾವೆಲ್ಲರೂ
ಹನುಮನ ಮನೆಯವರು ॥ ಪ ॥

ಅನುಮಾನ ಪಡೆದೆಲೆ ಸ್ಥಳವ ಕೊಡಿರಿ ಎಮಗೆ ॥ ಅ. ಪ ॥
ಊರ್ಧ್ವಪುಂಡ್ರವ ನೋಡಿ ಶ್ರದ್ಧೆಭಕುತಿ ನೋಡಿ ।
ಹೃದ್ಗತವಾದೆಮ್ಮ ತತ್ವಗಳನೆ ನೋಡಿ ।
ಇದ್ದುದನಿಲ್ಲೆಂಬ ಅಬದ್ಧ ನುಡಿವರಲ್ಲಾ ।
ಮಧ್ವಮುನಿಯು ನಮ್ಮ ತಿದ್ದಿರುವುದ ನೋಡಿ ॥ ೧ ॥

ಸತ್ಯ ಮಿಥ್ಯಗಳಿಗೆ ಅಂತರ ಬಲ್ಲೆವು ।
ಉತ್ತಮನೀಚರೆಂಬುವ ಭೇದ ಬಲ್ಲೆವು ।
ಸುತ್ತಲು ಕಂಡು ಕಾಣದೆ ಇಹ ಎಲ್ಲಕ್ಕೂ ।
ಉತ್ತಮನೊಬ್ಬನೇ ಹರಿಯೆಂದು ಬಲ್ಲೆವು ॥ ೨ ॥

ಹಲವು ಲೋಕಗಳುಂಟೆಂಬುದ ಬಲ್ಲೆವು ।
ಹಲವು ಯೋನಿಗಳಲ್ಲಿ ಜನ್ಮಗಳೊಲ್ಲೆವು ।
ಅಲವ ಬೋಧರು ನಮ್ಮ ಕಳುಹಿದರಿಲ್ಲಿಗೆ ।
ತಿಳಿಸಿ **ಪ್ರಸನ್ನ ಶ್ರೀ** ಹರಿಗೆ ವಿಚಾರವ ॥ ೩ ॥
**(ವಿದ್ಯಾಪ್ರಸನ್ನತೀರ್ಥರ ಕೃತಿ)**

## ರಾಗ – ಸಿಂಧುಭೈರವಿ – ಆದಿತಾಳ

ಹನುಮಾನ್ ಕೀ ಜೈ ಹನುಮಾನ್ ಕೀ ಜೈ ।
ಹನುಮಾನ್ ಕೀ ಜೈಜೈ ಹನುಮಾನ್ ॥ ಪ ॥

ಥೈ ಥೈ ಥೈ ಥೈ ಥೈಥಕ ಥೈಥಕ ।
ತಕಿಟ ತಕಿಟ ತಕ ಜೈ ಹನುಮಾನ್ ॥ ಅ. ಪ ॥

ಹರಿ ಸರ್ವೋತ್ತಮನೆಂಬುವ ತತ್ವಕೆ ಜಯ ।
ಭೇರಿಯ ಹೊಡೆದೆಯೋ ಹನುಮ ।
ಢಣ ಢಣ ಢಣ ಢಣ ಢಣ ಢಣ ।
ಢಣ ಜಯಭೇರಿಯ ನಾದವು ಕೇಳುತಿದೆ ॥ ೧ ॥

ವೈಷ್ಣವ ತತ್ವಗಳನು ಬೋಧಿಸಿ ಜಯ ।
ಭೇರಿಯ ಹೊಡೆದೆಯೋ ಬಲ ಭೀಮ ।
ಢಣ ಢಣ ಢಣ ಢಣ ಢಣ ಢಣ ।
ಢಣ ಜಯಭೇರಿಯ ನಾದವು ಕೇಳುತಿದೆ ॥ ೨ ॥

ಮೋಕ್ಷಕೆ ಒಳ್ಳೆಯ ಮಾರ್ಗವ ತೋರುವ ।
ಜಯ ಭೇರಿಯ ಹೊಡೆದೆಯೋ ಮಧ್ವ ॥
ಢಣ ಢಣ ಢಣ ಢಣ ಢಣ ಢಣ ।
ಢಣ ಜಯಭೇರಿಯ ನಾದವು ಕೇಳುತಿದೆ ॥ ೩ ॥

ಅಂದಿನ ನಾದವು ಇಂದು ನುಡಿಯುತಿರೆ ।
ಮಂದಿಗಳೆಲ್ಲರು ಕೇಳುವರು ॥
ತಂದೆ **ಪ್ರಸನ್ನ**ನ ಮಂದಿರದಲಿ ಇದು ।
ಎಂದೆಂದಿಗೂ ಶಾಶ್ವತವಿರಲಿ ॥ ೪ ॥
**(ವಿದ್ಯಾಪ್ರಸನ್ನ ತೀರ್ಥರ ಕೃತಿ)**

## ರಾಗ – ಕಾಂಬೋಧಿ – ಅಟ್ಟತಾಳ

ಮಧ್ವರಾಯ ಕರುಣೆ ಪಡೆಯದವ ।
ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು ॥ ಪ ॥

ಮಧ್ವಮತವೇ ಮತವು ಸಕಲ ಶ್ರುತಿ ಸಮ್ಮತವು ।
ಮಧ್ವರಾಯರ ಧ್ಯಾನ ಅಮೃತಪಾನ ॥
ಮಧ್ವರಾಯರ ಲೀಲೆ ನವರತುನದಾಮಾಲೆ ।
ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ ॥ ೧ ॥

ಮಧ್ವರಾಯರ ಕಥೆಯ ಕೇಳಲದು ದುರಿತ ಹತ ।
ಮಧ್ವರಾಯರ ಭಕುತಿ ಮಾಡೆ ಮುಕುತಿ ॥
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ ।
ಮಧ್ವರಾಯರ ಭಜನೆ ದುಷ್ಕರ್ಮತ್ಯಜನೆ ॥ ೨ ॥
ಮಧ್ವರಾಯರ ದಾಸನಾದವನೆ ನಿರ್ದೋಷ ।
ಮಧ್ವರಾಯರ ಬಂಟ ಜಗಕೆ ನೆಂಟ ॥
ಮಧ್ವರಮಣ ನಮ್ಮ **ವಿಜಯ ವಿಠಲ**ನಾದ
ಮಧ್ವೇಶನಾ ಕರುಣ ಪಡೆದವನೆ ಧನ್ಯ ॥ ೩ ॥

## ರಾಗ – ಸೌರಾಷ್ಟ್ರ – ಅಟ್ಟತಾಳ

ಏಳೇಳು ಶರಧಿಯು ಏಕವಾಗಿದೆ ಕಂಡ್ಯ ।
ಹ್ಯಾಗೆ ಬಂದೆ ಹೇಳೋ ಕೋತಿ ॥ ಪ ॥
ಏಳು ಶರದಿಯು ಎನಗೆ ಏಳು ಕಾಲುವೆಯು ।
ತೂಳಿಲಂಘಿಸಿ ಬಂದೆ ಭೂತ ॥ ಅ. ಪ ॥
ಏಳು ಸಮುದ್ರದೊಳಿರುವ ಮಕರಿ ಮತ್ಸ್ಯ
ಹ್ಯಾಗೆ ಬಿಟ್ಟರು ಹೇಳು ಕೋತಿ ।
ಏಳು ಸಮುದ್ರದ ಮಕರಿ ಮತ್ಸ್ಯದ ಕೂಡೆ ।
ಮಾತಾಡಿ ಬಂದನೊ ಭೂತ ॥ ೧ ॥
ಲಂಕಾದ್ವಾರದೊಳೊಬ್ಬ ಲಂಕಿಣಿ ಇರುವಳು ।
ಹ್ಯಾಗೆ ಬಿಟ್ಟಳು ಹೇಳೊ ಕೋತಿ ।

ಲಂಕಿಣಿಯನು ಕೊಂದು ಶಂಕೆ ಇಲ್ಲದೆ ನಾನು
ಬಿಂಕಾದಿಂದಲಿ ಬಂದೆ ಭೂತ । ॥ ೨ ॥
ಕೊಂಬೆಕೊಂಬೆಗೆ ಕೋಟಿ ಮಂದಿ ರಾಕ್ಷಸರಿರೆ ।
ಹ್ಯಾಗೆ ಬಿಟ್ಟರು ಹೇಳೊ ಕೋತಿ ।
ಕೊಂಬೆಕೊಂಬೆಗೆ ಕೋಟಿ ಮಂದಿ ರಾಕ್ಷಸರನ್ನು
ಕೊಂದ್‌ಹಾಕಿ ಬಂದೆನೊ ಭೂತ ॥ ೩ ॥
ಯಾವೂರೊ ಎಲೊ ನೀನು ಯಾವ ಭೂಮಿಯೊನಿಂದು ।
ಯಾಕೆ ಬಂದೆ ಹೇಳೊ ಕೋತಿ ।
ಯಾವ ವನದೊಳಗೆ ಜಾನಕಿದೇವಿ ಇದ್ದಳೊ
ಅವಳ ನೋಡ ಬಂದ ಭೂತ ॥ ೪ ॥
ದಕ್ಷಿಣಪುರಿ ಲಂಕಾ ದಾನವರಿಗಲ್ಲದೆ ।
ತ್ರಕ್ಷ್ಯಾದ್ಯರಿಗಳವಲ್ಲ ಕೋತಿ ।
ಪಕ್ಷಿಧ್ವಜ ರಾಮನ ಅಪ್ಪಣೆ ಎನಗಿಲ್ಲ ।
ಈ ಕ್ಷಣದಿ ತಪ್ಪಿಸಿಕೊಂಡೆ ಭೂತ ॥ ೫ ॥
ದೂತನಾಗಿಹೆ ಎನ್ನ ಕೈಯೊಳು ಸಿಕ್ಕಿಹೆ ।
ಕೋಪವಿನ್ಯಾತಕೊ ಕೋತಿ ।
ನಾತಾಳಿ ಕೊಂಡಿಹೆನು ಈ ಕ್ಷಣದಿ ಲಂಕೆ ।
ನಿರ್ಧೂಮವವನು ಮಾಳ್ಪೆ ಭೂತ ॥ ೬ ॥
ನಿಮ್ಮಂಥ ದಾಸರು ನಿಮ್ಮರಸನ ಬಳಿ ।
ಎಷ್ಟು ಮಂದಿದ್ದಾರೊ ಕೋತಿ ।
ನನ್ನಂಥ ದಾಸರು ನಿನ್ನಂಥ ಹೇಡಿಗಳು ।
ಕೋಟ್ಯಾನು ಕೋಟಿಯೊ ಭೂತ ॥ ೭ ॥
ಎಲ್ಲಿಂದ ನೀ ಬಂದೆ ಏತಕೆಲ್ಲರ ಕೊಂದೆ ।
ಯಾವರಸಿನ ಬಂಟ ಕೋತಿ ।
ಚೆಲ್ವಂಯೋಧ್ಯಾಪುರದರಸು ಜಾನಕಿಪತಿ ।
ರಾಮಚಂದ್ರನ ಭಂಟ ಭೂತ ॥ ೮ ॥
ಸಿರಿ ರಾಮಚಂದ್ರನು ನಿನ್ನರಸನಾದರೆ ।
ಆತ ಮುನ್ನಾರು ಹೇಳೊ ಕೋತಿ ।
ಹಿರಣ್ಯಕನನು ಸೀಳಿ ಪ್ರಲ್ಹಾದಗೊಲಿದ ।
**ಶ್ರೀಪುರಂದರ ವಿಠಲನೊ** ಭೂತ ॥ ೯ ॥

**ರಾಗ – ಮೋಹನ – ಅಟ್ಟತಾಳ**

ಮಾಮರುಘು ಭಾಪುರೆ ಭಳಿರೆ ಹನುಮಂತ ॥ ಪ ॥
ರಾಮಪದ ಸೇವಿಪ ವೀರ ಹನುಮಂತ ॥ ಅ.ಪ ॥

ಹುಟ್ಟುತಲೆ ಹೊನ್ನ ಕಚ್ಚುಟವ ಕುಂಡಲವೆರಿಸಿ ।
ನಿಷ್ಟೆಯಲಿ ರಘುಪತಿಯ ಪಾದವನೆ ಕಂಡು ।
ದಿಟ್ಟ ಹರಿದಾಡಿ ಮನಮುಟ್ಟಿ ಪೂಜಿಸಲಜನ ।
ಪಟ್ಟಕನುವಾದ ಸಿರಿವಂತ ಹನುಮಂತ ॥ ೧ ॥

ಅಂಬರಕೆ ಪುಟನೆಗೆದು ಅಂಬುಧಿಯ ನೆರೆ ದಾಟಿ ।
ಕುಂಭಿಣಿಯ ಮಗಳಿಗುಂಗುರವನಿತ್ತೆ ।
ಬೆಂಬಿಡದೆ ಲಂಕೆಯುನು ಸಂಭ್ರಮದಿ ಸಖಿಗಿತ್ತೆ ।
ಗಂಭೀರ ವೀರಾಧಿವೀರ ಹನುಮಂತ ॥ ೨ ॥
ಅತಿದುರುಳ ರಕ್ಕಸನು ರಥದ ಮೇಲಿರಲು ।
ರಘುಪತಿಯು ಪದಚರಿಯಾಗಿ ನಿಂತಿರಲು ।
ಪೃಥಿವಿ ಗಗನಕೆ ಬೆಳೆದು ರಥವಾದೆ ಒಡೆಯನಿಗೆ ।
ಅತಿ ಭಯಂಕರ ಸತ್ವವಂತ ಹನುಮಂತ ॥ ೩ ॥

ಒಡೆಯ ಉಣಕರೆಯಲಂದಡಿಗಡಿಗೆ ಕೈ ಮುಗಿದು ।
ಧೃಡ ಭಕುತಿಯಿಂದ ಮೌನದಲಿ ಕುಳಿತು ।
ಎಡೆಯಕೊಡೆದ್ದೋಡಿ ಗಗನದಲಿ ಸುರರಿಗೆ ।
ಕೊಡುತ ಸವಿದುಂಡ ಗುಣವಂತ ಹನುಮಂತ ॥ ೪ ॥

ಪ್ರಥಮದಲ್ಲಿ ಹನುಮಂತ ದ್ವಿತೀಯದಲಿ ಕಲಿಭೀಮ ।
ತೃತೀಯದಲಿ ಗುರುಮಧ್ವಮುನಿಯು ಎನಿಸಿ ।
ಪ್ರತಿ ಇಲ್ಲದಲೆ ಮೆರೆದೆ **ಪುರಂದರ ವಿಠಲನ** ।
ಭಕ್ತ ನಿನಗಾರು ಸರಿ ವಿಜಯ ಹನುಮಂತ ॥ ೫ ॥

**ರಾಗ – ಮೋಹನ – ಆದಿತಾಳ**

ಹನುಮ ಭೀಮ ಮಧ್ವ ಮುನಿಯ ನೆನೆದು ಬದುಕಿರೊ ॥ ಪ ॥
ಅನುಮಾನಂಗಳಿಲ್ಲದಲೆ ಮನೋಭೀಷ್ಟಂಗಳೀವ ॥ ಅ.ಪ ॥

ಪ್ರಾಣಿಗಳ ಪ್ರಾಣೋದ್ಧಾರ ಜೀವರಲ್ಲುತ್ತಮನು ಮತ್ತೆ ।
ಪ್ರಾಣಾಪಾನ ವ್ಯಾನೋದಾನ ಸಮಾನರೊಳುತ್ಕೃಷ್ಟ ।
ಕ್ಷೋಣಿ ದೈತ್ಯರನ್ನು ಸೀಳಿ ಪಾಲಿಪ ಸುಜನರನ್ನು ।
ತ್ರಾಣದಿಂದಲಿ ಮೆರೆದ ಬಹುಜಾಣ ಗುರು ಮುಖ್ಯಪ್ರಾಣ ॥ ೧ ॥

ಕಾಮಧೇನು ಚಿಂತಾಮಣಿ ಕಲ್ಪವೃಕ್ಷನಾದ ಸ್ವಾಮಿ ।
ಪ್ರೇಮದಿಂದಲಿ ನೆನೆಯುವವರ ಭಾಗ್ಯಕ್ಕೆಣೆಯುಂಟೆ ।
ಸಾಮಾನ್ಯನಲ್ಲವೋ ಈತ ಮೋಕ್ಷಾದಿ ಸಂಪದವಿಗಳಿಗೆ ।
ಆ ಮಹಾ ಅಪರೋಕ್ಷ ಜ್ಞಾನ ದಾರಢ್ಯ ಭಕುತಿಯ ಕೊಡುವ ॥ ೨ ॥

ಅವತಾರತ್ರಯಗಳಿಂದ ಶ್ರೀಹರಿಯ ಸೇವಿಸುವ ।
ತವಕದಿಂದ ಪೂಜಿಪ ಮಹಾಮಹಿಮೆಯುಳ್ಳವನು ।
ಕವಿತಾ ವಾಕ್ಯವಲ್ಲವದು ಅವಿವೇಕಿಗಳೆಂದೆಣಿಸದಿರಿ ।
ಭವಬಂಧನವ ಬಿಡಿಸಿ ನಮ್ಮಕಾವ **ಪುರಂದರ ವಿಠಲ**ನದಾಸ ॥ ೩ ॥

**ರಾಗ – ಷಣ್ಮುಗಪ್ರಿಯ – ಆದಿತಾಳ**

ಜನುಮ ಜನುಮದಲಿ ಎನಗಿರಲಿ ॥
ಹನುಮ ಭೀಮ ಮಧ್ವ ಮುನಿಗಳ ಸೇವೆಯು ॥ ಪ ॥

ಮಾತರಿಶ್ವ ನೀ ಪ್ರೀತನಾಗಿ ಅಜ ।
ತಾತನು ಸುಲಭದಿ ಒಲಿಯುವನು ।
ಕೋತಿಯ ರೂಪದಿ ಭೂತಳದಲಿ ಬಲು ।
ಖ್ಯಾತಿ ಪಡೆದ ರಾಮದೂತರ ಸೇವೆಯು ॥ ೧ ॥

ಹರನ ಭಕುತ ಜರಾಸಂಧನ ಕಾಯುವ ।
ಹರಿದು ಮುರಿದು ಬಲು ಸುಲಭದಲಿ ।
ಹರಿಗಪರೋಕ್ಷದಿ ಅರ್ಪಣೆ ಮಾಡಿದೆ ।
ಕುರುಕುಲಪತಿ ಬಲಭೀಮರ ಸೇವೆಯು ॥ ೨ ॥

ಶುದ್ಧದ್ವಿಜಕುಲದಲಿ ಉದ್ಭವಿಸುತ ।
ಅನಿ–ರುದ್ಧನಿಗನುಮತವಾಗಿರುವ ।
ಸಿದ್ಧಾಂತದ ಪದ್ಧತಿಯನು ತೋರಿದ ।
ಮಧ್ವ ಮತದ ತತ್ವದಲಿ **ಪ್ರಸನ್ನತೆ** ॥ ೩ ॥

**ರಾಗ – ಕಲ್ಯಾಣಿ – ಅಟ್ಟತಾಳ**

ಜಾಣ ನೀನಹುದೊ । ಗುರು ಮುಖ್ಯ । ಪ್ರಾಣ ನೀನಹುದೊ ॥ ಪ ॥

ರಾಣಿಭಾರತಿರಮಣ–ಗೆಣೆಗಾಣೆ ತ್ರಿಭುವನದೊಳಗೆ ಸಕಲ ।
ಪ್ರಾಣಿಗಳ ಹೃದಯದಲಿ ಮುಖ್ಯಪ್ರಾಣ ನೀನೆಲೆ ಪ್ರಾಣನೆನಿಸಿದ ॥ ಅ.ಪ ॥

ಧೀರ ನೀನಹುದೋ । ವಾಯು ಕುಮಾರ ನೀನಹುದೊ ।
ಕೋರಿದವರಿಗೆ ಮನೋವೃತಗಳ । ಭಾರಿಭಾರಿಗೆ ಕೊಡುವೆನೆನುತಲಿ ।
ಕ್ಷೀರನದಿಯ ತೀರ ನೆಲೆಸಿದ । ಮಾರುತಾವತಾರ ಹನುಮ ॥ ೧ ॥

ದಿಟ್ಟ ನೀನಹುದೊ । ಬೆಟ್ಟ ತಂದಿಟ್ಟವ ನೀನಹುದೊ ।
ಅಟ್ಟಿಬಡದು ಆ ಅಕ್ಷಕುಮಾರನ । ಕಟ್ಟಿ ಬೇಗದಿ ಕೆಡಹಿ ಲಂಕೆಯ ।
ಸುಟ್ಟು ಸೀತೆಗೆ ಉಂಗುರವನೆ ಕೊಟ್ಟ ಮೂಜಗಜಟ್ಟಿ ಹನುಮಾ ॥ ೨ ॥

ಚಂಡನು ನೀನಹುದೊ । ದುರಿತ ಮಾರ್ತಾಂಡನು ನೀನಹುದೊ ।
ಅಂದುಗೆ ಕಿರುಘಂಟೆ ಉಡಿಯಲಿ । ಚಂದದಲಿ ಯೋಲಾಡುತಿರಲಾ ।
ನಂದದಲಿ **ಶ್ರೀಕೃಷ್ಣ**ನಂಘ್ರಿ ಪುಂಡರೀಕಕೆ ಕೈ ಮುಗಿದಾ ॥ ೩ ॥

## ರಾಗ – ಶಂಕರಾಭರಣ – ಅಟ್ಟತಾಳ

ನೋಡಿದ್ಯಾ ಸೀತಮ್ಮ ನೀ ನೋಡಿದ್ಯಾ ॥ ಪ ॥
ನೋಡಿದ್ಯಾ ಹನುಮನಾರ್ಭಟವ । ಹಾಳು ಮಾಡಿದ ಕ್ಷಣದಲಿ ವನವಾ ।
ಆಹಾ । ಝಾಡಿಸಿ ಕಿತ್ತು ಈಡ್ಯಾಡಿ ವೃಕ್ಷಗಳ।
ಕೊಂಡಾಡುವ ನಿನ್ನಯ ಕೋಡಗನ್ನರುಷವಾ ॥ ಅ.ಪ ॥

ಮಾತೆ ನಿನ್ನಾಜ್ಞೆಯ ಕೊಂಡು । ಆರ ।
ಭೀತಿ ಇಲ್ಲದೆ ಫಲ ಉಂಡು ।
ದೈತ್ಯದೂತ ಬರಲು ಭಾರಿ ಹಿಂಡು ॥ ಆಹಾ ॥
ವಾತಜಾತ ಬಂದ ಪಾತಕಿಗಳನೆಲ್ಲ ।
ತಾ ತವಕದಿ ಕೊಂದು ಭೂತಳ ಖಾಕಿದ ॥ ೧ ॥

ಸೊಕ್ಕಿರಾವಣನೆಂಬ ಗಂಡ । ಮಹ ।
ಲಕುಮಿಯನ ಕರಕೊಂಡ । ರಾಮ ।
ರಕ್ಕಸಾಂತಕ ಆಕೆ ಗಂಡ । ಕಪಿ ।
ಗಿಕ್ಕಿರೆಂದು ಕಮದಂಡ ॥ ಆಹ ॥
ಮಿಕ್ಕ ಖಳರು ಕೂಡಿ ಲೆಕ್ಕಿಸಿ ಮಾತಾಡಿ ।
ಸಿಕ್ಕರೆ ಬಿಡೆನೆಂದು ದಿಕ್ಕುಪಾಲಾದ ॥ ೨ ॥

ಎಷ್ಟೇಳವನ ಪ್ರತಾಪ । ನೋಡು ।
ಸುಟ್ಟೆನೆಂಬ ಲಂಕಾದ್ವೀಪ । ಎಂಥಾ ।
ಘಟ್ಟಿಗ ನೋಡೆ ನಮ್ಮಪ್ಪ ॥ ಆಹ ॥
ಸೃಷ್ಟೀಶ **ಕೇಶವ ವಿಠಲ**ರಾಯನ ।
ಮುಟ್ಟಿ ಭಜಿಸಲಜ ಪಟ್ಟಾಳೇನೆಂದ್‌ಹೋದಾ ॥ ೩ ॥

**ರಾಗ – ನಾದನಾಮಕ್ರಿಯೆ ಅಟ್ಟತಾಳ**

**ಮರುದಂಶರ ಮತ ಪಿಡಿಯದೆ ಇಹ ।**
**ಪರದಲ್ಲಿ ಸುಖವಿಲ್ಲವಂತೆ ॥ ಪ ॥**

**ಅರಿತು ವಿವೇಕದಿ ಮರೆಯದೆ ನಮ್ಮ**
**ಗುರುರಾಯರ ನಂಬಿ ಬದುಕಿರೋ ॥ ಅ ಪ ॥**

**ಕ್ಷೀರವ ಕರೆದಿಟ್ಟ ಮಾತ್ರದಿ ಸಂ**
**ಸ್ಕಾರವಿಲ್ಲದೆಘೃತವಾಗದಂತೆ**
**ಸೂರಿಜನರ ಸಂಗವಿಲ್ಲದೆ ಸಾರ**
**ವೈರಾಗ್ಯಭಾಗ್ಯ ಪುಟ್ಟದಂತೆ ॥ ೧ ॥**

**ಉಪದೇಶವಿಲ್ಲದ ಮಂತ್ರ ಏಸು**
**ಜಪಿಸಲು ಫಲಗಳ ಕೊಡದಂತೆ**
**ಉಪವಾಸ–ವ್ರತಗಳಿಲ್ಲದೆ ಜೀವ**
**ತಪಸಿಯೆನಿಸಿಕೊಳ್ಳ ಲರಿಯನಂತೆ ॥ ೨ ॥**

**ಸಾರ ಮಧ್ವಶಾಸ್ತ್ರವೋದದೆ ಗುರು**
**ತಾರತಮ್ಯಜ್ಞಾನ ಪುಟ್ಟದಂತೆ**
**ಶ್ರೀರಂಗವಿಠ್ಠಲನ ಭಜಿಸದೆ ಮುಂದೆ**
**ಪರಮಗತಿ ದೊರಕೊಲ್ಲದಂತೆ ॥ ೩ ॥**

**––––––– ಶ್ರೀಪಾದರಾಜರು**

ರಾಗ ಮೋಹನ ಮಿಶ್ರಛಾಪುತಾಳ

ಈತನೇ ಕಾಣಿರೋ ಮಧ್ವಮುನಿ ॥ ಪ ॥
ಪರಿಪರಿ ಶ್ರುತಿಗಳೆಂಬ ಗುಹೆಗಳಲ್ಲಿ ಕೇ
ಸರಿಯಂತೆ ಚರಿಸುತ್ತ
ಹರಿಯೆ ಸರ್ವೋತ್ತಮನೆಂಬ ಘೋಷಗಳಿಂದ
ದುರುಳವಾದಿಗಳೆಂಬ ನರಿಗಳೋಡಿಸಿದಾತ ॥ ೧ ॥

ಸಕಲಾಗಮಗಳೆಂಬ ಶರಧಿಯೊಳಗೆ
ಮುಕುತಿಯಲಿ ಮಥಿಸಿ
ಅಕಳಂಕ ಶ್ರೀಹರಿಯೆಂಬ ರತ್ನವ ಕಂಡು
ಮುಕುಟದೊಳಗಿಟ್ಟು ಲೋಕದಿ ಮೆರೆದಾತ ॥ ೨ ॥

ವೇದಸಾರನೆಂಬ ಈಶತತ್ತ್ವವಾದ
ಸುಧೆಯ ಕಲ್ಪಿಸಿಕೊಂಡು
ಆದಿಮೂರುತಿ ಶ್ರೀಹಯವದನನ ದಿವ್ಯ
ಪಾದಸೇವಕನಾದ ಮಧ್ವಮುನಿಯೆಂಬಾತ ॥ ೩ ॥
---------ಶ್ರೀವಾದಿರಾಜರು